# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| 1. ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | : | 31 (447) |
| 2. ಸದಸ್ಯರ ಹೆಸರು | : | ಶ್ರೀ ಐವನ್ ಡಿ' ಸೋಜಾ (ನಾಮ ನಿರ್ದೇಶನ ಹೊಂದಿದವರು) |
| 3. ಉತ್ತರಿಸುವ ದಿನಾಂಕ | : | 12.12.2018 |
| 4. ಉತ್ತರಿಸುವ ಸಚಿವರು | : | ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ, ಸಕ್ಕರೆ, ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ | Reply |
|---|---|---|---|
| ಅ. | ದಕ್ಷಿಣ ಕನ್ನಡ ಜಿಲ್ಲೆಯ ಮೆ॥ ಎಂ.ಆರ್.ಪಿ.ಎಲ್. ನ 4 ನೇ ಹಂತದ ವಿಸ್ತರಣೆ ಕೈಗಾರಿಕೆ ಸಂಸ್ಥೆ ಯಿಂದ ಎಷ್ಟು ಭೂಮಿ ಯನ್ನು ಯಾವ ನಿಯಮದನ್ವಯ ಸ್ವಾಧೀನ ಮಾಡಲು ಸರ್ಕಾರ ತೀರ್ಮಾನಿಸಿದೆ; | ದಿನಾಂಕ: 29.08.2015 ರಂದು ನಡೆದ SHLCC ಸಭೆಯಲ್ಲಿ ಮೆ॥ಎಂ.ಆರ್.ಪಿ.ಎಲ್. ಘಟಕದ 4ನೇ ಹಂತದ ವಿಸ್ತರಣಾ ಯೋಜನೆಗಾಗಿ ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು ತಾಲೂಕು, ಪೆರ್ಮುದೆ, ಕುತ್ತೆತ್ತೂರು, ತೆಂಕ ಎಕ್ಕಾರು, ಮೂಳೂರು ಮತ್ತು ಕಂದಾವರ ಗ್ರಾಮಗಳ ಒಟ್ಟು 1050 ಎಕರೆ ಜಮೀನನ್ನು ಕೆ.ಐ.ಎ.ಡಿ.ಬಿ. ಮುಖಾಂತರ ಭೂಸ್ವಾಧೀನಪಡಿಸಿ, ಹಂಚಿಕೆ ಮಾಡಲು ನಿರ್ಣಯಿಸಲಾಗಿದೆ.<br><br>ಅದರಂತೆ 1966 ರ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಕಾಯ್ದೆಯಡಿ ಭೂ ಸ್ವಾಧೀನಪಡಿಸಿದ ಜಮೀನಿನ ವಿವರ ಈ ಕೆಳಕಂಡಂತಿದೆ:-<br><br>• ಪೆರ್ಮುದೆ, ಕುತ್ತೆತ್ತೂರು, ತೆಂಕ ಎಕ್ಕಾರು, ಮೂಳೂರು ಮತ್ತು ಕಂದಾವರ ಗ್ರಾಮಗಳ 1011-77 ಎಕರೆ ವಿಸ್ತೀರ್ಣಕ್ಕೆ ದಿನಾಂಕ: 20.12.2016 ರಂದು ಪ್ರಾಥಮಿಕ ಅಧಿಸೂಚನೆ ಹೊರಡಿಸಲಾಗಿದೆ.<br>• ಈ ಪೈಕಿ ತೆಂಕ ಎಕ್ಕಾರು, ಮೂಳೂರು ಮತ್ತು ಕಂದಾವರ ಗ್ರಾಮಗಳ 150-95 ಎಕರೆ ಜಮೀನಿಗೆ ಕೆ.ಐ.ಎ.ಡಿ. ಕಾಯ್ದೆ ಕಲಂ 28(4) ರಡಿ ದಿನಾಂಕ: 15.12.2017ರಂದು ಅಂತಿಮ ಅಧಿಸೂಚನೆ ಹೊರಡಿಸಲಾಗಿದೆ.<br>• ಪೆರ್ಮುದೆ ಮತ್ತು ಕುತ್ತೆತ್ತೂರು ಗ್ರಾಮಗಳ ಉಳಿಕೆ 811-93 ಎಕರೆ ಜಮೀನಿಗೆ ಕೆ.ಐ.ಎ.ಡಿ. ಕಾಯ್ದೆ ಕಲಂ 28(4)ರಡಿ ದಿನಾಂಕ:20.01.2018ರಂದು ಅಂತಿಮ ಅಧಿಸೂಚನೆ ಹೊರಡಿಸಲಾಗಿದೆ. | In the SHLCC meeting held on 29.08.2015, it was approved that KIADB to acquire and allot 1050 acres of land at Permude, Kuttetur, Tenka ekkaru, Muluru and Kandavara villages, Mangaluru Taluk, Dakshina Kannada District.<br><br>Accordingly, the land acquisition under KIAD Act, 1966 are as follows:<br><br>• 1011.77 acres of land at Permude, Kuttetur, Tenka ekkaru, Muluru and Kandavara villages have been notified under preliminary notification on 20.12.2016.<br>• Out of which, 150.95 acres of land at Tenka ekkaru, Muluru and Kandavara villages, have been notified under 28(4) final notification on 15.12.2017.<br>• 811.93 acres of land at Permude, Kuttetur villages, have been notified under 28(4) final notification on 20.01.2018. |

| | | | |
|---|---|---|---|
| ಆ. | ಸ್ವಾಧೀನಪಡಿಸಿಕೊಳ್ಳಲು ಉದ್ದೇಶಿಸಿರುವ ಭೂಮಿಗೆ ಯಾವ ನಿಯಮದಂತೆ ಪರಿಹಾರ ಧನ ನೀಡ ಲಾಗುತ್ತದೆ; 2013 ರ ಒಪ್ಪಂದದ ಪ್ರಕಾರ ಎಕರೆ ಒಂದಕ್ಕೆ ನೀಡಲಾದ ಕನಿಷ್ಠ ಪರಿಹಾರ ಎಷ್ಟು; (ವಿವರ ನೀಡುವುದು) | ಸ್ವಾಧೀನಪಡಿಸಿಕೊಂಡ ಜಮೀನುಗಳಿಗೆ ಸಂಬಂಧಪಟ್ಟ ಜಿಲ್ಲೆಯ ಜಿಲ್ಲಾಧಿಕಾರಿಯವರ ಅಧ್ಯಕ್ಷತೆಯಲ್ಲಿ ಭೂದರ ನಿರ್ಧರಣಾ ಸಲಹಾ ಸಮಿತಿ ಸಭೆಯನ್ನು ನಡೆಸಿ, ಭೂ ಮಾಲೀಕರೊಂದಿಗೆ ಚರ್ಚಿಸಿ ಹಾಗೂ 2013 ರ ಹೊಸ ಭೂಸ್ವಾಧೀನ ಕಾಯ್ದೆಯನ್ನು ಗಮನದಲ್ಲಿಟ್ಟುಕೊಂಡು, ಒಪ್ಪಂದದಂತೆ ದರವನ್ನು ನಿಗಧಿಪಡಿಸಲಾಗುತ್ತದೆ.<br><br>ಸದರಿ ಜಮೀನಿಗೆ ಭೂ ಪರಿಹಾರ ನಿಗಧಿ ಪಡಿಸುವ ಪ್ರಕ್ರಿಯೆ ಜಾರಿಯಲ್ಲಿರುತ್ತದೆ. | Price Advisory Committee under the Chairmanship of concerned Deputy Commissioner will determine the land compensation based on the discussions with land owners and also keeping in mind the new land acquisition Act, 2013.<br><br>Fixing of land price for this land is under process. |
| ಇ. | ರಾಜ್ಯದಲ್ಲಿ ವಿಸ್ತರಿಸುವ ಕೈಗಾರಿಕೆಗಳಿಗೆ ಭೂಮಿ ಯನ್ನು ಸ್ವಾಧೀನ ಪಡಿಸಿ ಕೊಂಡ ಸಂದರ್ಭ ದಲ್ಲಿ ನೀಡಬೇಕಾದ ಉದ್ಯೋಗ ಮತ್ತು ಇತರ ಪ್ಯಾಕೇಜ್ ಗಳನ್ನು ನೀಡದೇ ಇರುವ ಬಗ್ಗೆ ಅನೇಕ ಕೇಸುಗಳು ದಾಖಲಾಗಿದ್ದು, ಈ ಬಗ್ಗೆ ಇಲಾಖೆ ಕೈಗೊಂಡ ಕ್ರಮಗಳೇನು; | ಕೈಗಾರಿಕೆಗಳಿಗೆ ಭೂಮಿಯನ್ನು ಸ್ವಾಧೀನಪಡಿಸಿ ಕೊಂಡ ಸಂದರ್ಭದಲ್ಲಿ 2014-19 ನೇ ಕೈಗಾರಿಕಾ ನೀತಿ ಅನ್ವಯ ಸ್ಥಳೀಯರಿಗೆ ಒಟ್ಟಾರೆಯಾಗಿ ಕನಿಷ್ಠ 70 ರಷ್ಟು ಉದ್ಯೋಗ ನೀಡಬೇಕೆಂದು ಹಾಗೂ ಭೂಮಿ ಕಳೆದು ಕೊಂಡ ಪ್ರತಿ ಕುಟುಂಬದ ಒಬ್ಬ ಸದಸ್ಯನಿಗೆ ಉದ್ಯೋಗವಕಾಶವನ್ನು ನೀಡಬೇಕೆಂದು ಷರತ್ತು ವಿಧಿಸಲಾಗುತ್ತಿದೆ.<br><br>ಇದರನ್ವಯ ಕೈಗಾರಿಕೆಗಳು ಉದ್ಯೋಗ ನೀಡ ಬೇಕಾಗಿದ್ದು, ಇದರಲ್ಲಿ ಯಾವುದೇ ವ್ಯತ್ಯಾಸ ಕಂಡುಬಂದಲ್ಲಿ, ಇಲಾಖೆಯು ಅಂತಹ ಕೈಗಾರಿಕೆಗಳಿಗೆ ಸೂಚನೆ ನೀಡಲಾಗುವುದು. | The Government is imposing condition to the units to provide 70% employment to kannadigas on an overall basis as per 2014-19 Industrial Policy and employment to one person in a land loser family.<br><br>As per this, the units have to provide employment. If there are any discrepancies, the Department will give instructions to those units to rectify the same. |
| ಈ. | ಕೈಗಾರಿಕೆಗಳು ಅಗತ್ಯಕ್ಕಿಂತ ಹೆಚ್ಚು ಭೂಮಿಯನ್ನು ವಶಪಡಿಸಿ, ನಂತರ ಸದರಿ ಭೂಮಿಯನ್ನು ಹೆಚ್ಚು ದರಗಳಿಗೆ ಮಾರಾಟ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಈ ಬಗ್ಗೆ ಸರ್ಕಾರ ಕ್ರಮ ಕೈ ಗೊಂಡಿದೆಯೇ; (ವಿವರ ನೀಡುವುದು) | ಸರ್ಕಾರದ ಪ್ರಧಾನ ಕಾರ್ಯದರ್ಶಿ, ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ ಇವರ ಅಧ್ಯಕ್ಷತೆಯಲ್ಲಿ ರಚಿತವಾಗಿರುವ ಲ್ಯಾಂಡ್ ಆಡಿಟ್ ಕಮಿಟಿ ಸಭೆಯು ಪ್ರತಿ ಯೋಜನೆಗೆ ಬೇಕಾಗುವ ಭೂಮಿಯ ವಿಸ್ತರಣೆಯನ್ನು ಪರಿಶೀಲಿಸಿ, ಪ್ರತಿಯೊಂದು ಯೋಜನೆಗೆ ಅಗತ್ಯವಾದ ಭೂಮಿಯನ್ನು ನಿರ್ದಿಷ್ಟ ಪಡಿಸಲಾಗುತ್ತಿದೆ. ಆದಕಾರಣ, ಅಗತ್ಯಕ್ಕಿಂತ ಹೆಚ್ಚು ಭೂಮಿಯನ್ನು ನೀಡುತ್ತಿರುವುದಿಲ್ಲ. | Land Audit Committee constituted under the Chairmanship of Principal Secretary to Govt., Commerce & Industries Dept., will scrutinize each project and decide the required land for the project. Therefore, excess land will not be given to the projects. |

<table>
<tr>
<td>ಉ.</td>
<td>ಉದ್ಯೋಗ ಸೃಷ್ಟಿಸುವ ಕೈಗಾರಿಕೆಗಳನ್ನು ಸ್ಥಾಪಿಸಲು ಇಲಾಖೆ ಮುಂದೆ ಪ್ರಸ್ತಾವನೆಗಳಿವೆಯೇ; (ವಿವರ ನೀಡುವುದು)</td>
<td>2018-19ರ ಸಾಲಿನಲ್ಲಿ ಅಂದರೆ ದಿನಾಂಕ 30-11-2018 ರವರಗೆ ರಾಜ್ಯ ಮಟ್ಟದ ಏಕಗವಾಕ್ಷಿ ಸಮಿತಿ ಸಭೆಯಲ್ಲಿ ಒಟ್ಟು 84 ಯೋಜನೆಗಳಿಗೆ ರೂ. 5,679.6 ಕೋಟಿಗಳ ಬಂಡವಾಳ ಹೂಡಿಕೆ ಮಾಡಲು ಅನುಮೋದನೆ ನೀಡಿದೆ, ಇದರಿಂದ ಸುಮಾರು 31,446 ಉದ್ಯೋಗಗಳು ಸೃಷ್ಟಿಯಾಗಲಿವೆ.</td>
<td>During 2018-19 i.e., upto 30.11.2018, 84 projects have been approved by the State Level Single Window Clearance Committee, with an investment of Rs. 5679.6 crore, generating employment to 31446 persons.</td>
</tr>
<tr>
<td>ಊ.</td>
<td>ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮೆ॥ ಎಂ.ಆರ್.ಪಿ.ಎಲ್. ನಲ್ಲಿ ಸ್ಥಳೀಯ ಮತ್ತು ಕನ್ನಡಿಗರಿಗೆ ಎಷ್ಟು ಉದ್ಯೋಗ ನೀಡಲಾಗಿದೆ; ಒಟ್ಟು ಇರುವ ಹುದ್ದೆಗಳೆಷ್ಟು? (ವಿವರ ನೀಡುವುದು)</td>
<td>ಮೆ॥ ಎಂ.ಆರ್.ಪಿ.ಎಲ್. ಘಟಕದಲ್ಲಿ 1868 ಉದ್ಯೋಗಿಗಳಿದ್ದು, ಅದರಲ್ಲಿ 1304 ಕನ್ನಡಿಗ ಉದ್ಯೋಗಿಗಳಿರುತ್ತಾರೆ. ವಿವರಗಳು ಕೆಳಕಂಡಂತಿವೆ:
<table>
<tr><th>ಗ್ರೂಪ್ ಎ</th><th>ಗ್ರೂಪ್ ಬಿ</th><th>ಗ್ರೂಪ್ ಸಿ</th><th>ಗ್ರೂಪ್ ಡಿ</th><th>ಒಟ್ಟು</th></tr>
<tr><td>797</td><td>0</td><td>1061</td><td>10</td><td>1868</td></tr>
<tr><td>371</td><td>0</td><td>923</td><td>10</td><td>1304<br>ಕನ್ನಡಿಗ</td></tr>
</table></td>
<td>Total 1868 employees are working in M/s MRPL, out of which 1304 employees are kannadigas.
<table>
<tr><th>Group A</th><th>Group B</th><th>Group C</th><th>Group D</th><th>Total</th></tr>
<tr><td>797</td><td>0</td><td>1061</td><td>10</td><td>1868</td></tr>
<tr><td>371</td><td>0</td><td>923</td><td>10</td><td>1304<br>ಕನ್ನಡಿಗ</td></tr>
</table></td>
</tr>
</table>

ಸಂಖ್ಯೆ: **ಸಿಐ 150 ಐಎಪಿ 2018**

(ಕೆ.ಜೆ. ಜಾರ್ಜ್)
ಬೃಹತ್ ಮತ್ತು ಮಧ್ಯಮ ಕೈಗಾರಿಕೆ, ಸಕ್ಕರೆ,
ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಹಾಗೂ
ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು